ವಿಜಯ ಕರ್ನಾಟಕ
NAMMA UDUPI
25 SEP 2026

## ಮಣಿಪಾಲ ಕೆಎಂಸಿ ಆಸ್ಪತ್ರೆಯ ವೈದ್ಯರಿಂದ ಯಶಸ್ವಿ ಶಸ್ತ್ರ ಚಿಕಿತ್ಸೆ

# 15 ದಿನಗಳ ಹಸುಗೂಸಿನ ಮೆದುಳಿನ ಗೆಡ್ಡೆ ತೆರವು

■ **ವಿಕ ಸುದ್ದಿಲೋಕ** ಉಡುಪಿ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯರು 15 ದಿನಗಳ ಹಸುಳೆಯ ತಲೆಬುರುಡೆಯೊಳಗಿನ ದೊಡ್ಡ ಗೆಡ್ಡೆಯನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾಗಿದ್ದಾರೆ.

ಮೂರು ವರ್ಷಗಳ ನಂತರ ಆ ಮಗು ಆರೋಗ್ಯಕರ ನರಮಂಡಲದ ಬೆಳವಣಿಗೆಯನ್ನು ಹೊಂದಿದ್ದು, ಈಗ ಶಾಲಾಪೂರ್ವ ಶಿಕ್ಷಣಕ್ಕೆ(ಪ್ರಿಸ್ಕೂಲ್) ಸಿದ್ಧವಾಗಿದೆ. ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಶಿಶುವನ್ನು ಆಸ್ಪತ್ರೆಗೆ ಕರೆತರಲಾಗಿತ್ತು.

ಮಗು ಗಂಭೀರ ನರರೋಗದ ಸಮಸ್ಯೆ ಹೊಂದಿರುವ ಸೂಚನೆಯಾಗಿತ್ತು. ಮೆದುಳಿನ ಎಂಆರ್ಐ ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ಗಾತ್ರದ 'ಹೈ- ಗ್ರೇಡ್' ಗೆಡ್ಡೆಯಾಗಿರುವ ಸಾಧ್ಯತೆಯನ್ನು ಬಲವಾಗಿ ಸೂಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ವೈದ್ಯಕೀಯ ತಂಡಕ್ಕೆ ಇದು ಅಸಾಧಾರಣ ಸವಾಲಾಗಿ ಪರಿಣಮಿಸಿತ್ತು. ಈ ವಯಸ್ಸಿನ ಮಗುವಿನಲ್ಲಿ ರಕ್ತದ ಪ್ರಮಾಣವು ಬಹಳ ಕಡಿಮೆಯಿರುವುದರಿಂದ, ಸ್ವಲ್ಪವೇ ರಕ್ತ ನಷ್ಟವಾದರೂ ಅದು ಗಂಭೀರ ಪರಿಣಾಮ ಬೀರಬಹುದು. ಹೀಗಾಗಿ, ಶಸ್ತ್ರಚಿಕಿತ್ಸೆ ನಡೆಸುವುದು ಹಾಗೂ ಆತಂಕಗೊಂಡಿರುವ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ ಸಂಪೂರ್ಣ ಅರಿವು ಮೂಡಿಸಿದ ನಂತರ, ವೈದ್ಯಕೀಯ ತಂಡ ಶಸ್ತ್ರಚಿಕಿತ್ಸೆಯನ್ನು ಮುಂದುವರಿಸಲು ನಿರ್ಧರಿಸಿತು. ನಿರೀಕ್ಷೆಯಂತೆಯೇ ಈ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದಾಗಿತ್ತು.

ಆದರೂ ನರರೋಗ ಶಸ್ತ್ರಚಿಕಿತ್ಸಕರು ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಶಸ್ತ್ರ ಚಿಕಿತ್ಸೆಯ ನಂತರ, ಮಗುವನ್ನು ಸೂಕ್ತ ಆರೈಕೆಗಾಗಿ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ(KMAW) ಸ್ಥಳಾಂತರಿಸಲಾಯಿತು. ಆರಂಭದಲ್ಲಿ ಸವಾಲುಗಳಿದ್ದರೂ, ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿತು. ಶಸ್ತ್ರಚಿಕಿತ್ಸೆ ನಡೆದ ಒಂದು ವಾರದ ನಂತರ ಮಗುವನ್ನು ಸ್ಥಿರವಾದ ಆರೋಗ್ಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಮಗುವಿನ ನರಮಂಡಲದ ಬೆಳವಣಿಗೆ ಮತ್ತು ಒಟ್ಟಾರೆ ಬೆಳವಣಿಗೆಯನ್ನು ತಂಡವು ಸೂಕ್ಷ್ಮವಾಗಿ ಗಮನಿಸುತ್ತಾ, ನಿಯಮಿತವಾಗಿ ಪರಿಶೀಲನೆಗೆ ಒಳಪಡಿಸುತ್ತಾ ಬಂದಿದೆ. ಮೂರು ವರ್ಷಗಳ ನಂತರ, ಮಗು ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದ್ದು, ಈಗ ತನ್ನ ಮುಂದಿನ ಮಹತ್ವದ ಹೆಜ್ಜೆಯಾದ 'ಪ್ರಿಸ್ಕೂಲ್'(ಪೂರ್ವ- ಪ್ರಾಥಮಿಕ ಶಾಲೆ) ಗೆ ಹೋಗಲು ಸಿದ್ಧವಾಗಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಡಾ.ರಾಘವೇಂದ್ರ ನಾಯಕ್ ನೇತೃತ್ವದ ನರಶಸ್ತ್ರ ಚಿಕಿತ್ಸಾ ವಿಭಾಗ, ಡಾ. ಶೀಲಾ ಎಸ್. ಮಥಾಯಿ ನೇತೃತ್ವದ ನವಜಾತ ಶಿಶು ಆರೈಕೆ ತಂಡ, ಡಾ.ವಾಸುದೇವ್ ಭಟ್ ನೇತೃತ್ವದ ಮಕ್ಕಳ ಆಂಕೊಲಾಜಿ ಸೇವೆಗಳು ಮತ್ತು ಸಮಗ್ರ ಪುನಶ್ಚೇತನ ಸೌಲಭ್ಯಗಳೊಂದಿಗೆ ಈ ಆರೈಕೆಯನ್ನು ಒದಗಿಸಲಾಗಿದೆ.

ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ನಿರ್ವಹಣಾಧಿಕಾರಿ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಆಸ್ಪತ್ರೆಯ ವೈದ್ಯರ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

---

www.vijayavani.net
ನಂ.1 ವಿಜಯವಾಣಿ ಕನ್ನಡ ದಿನಪತ್ರಿಕೆ
ಕಡಲು ಕರಾವಳಿ ಸುದ್ದಿ ಸಮೃದ್ಧಿ

## 3 ವರ್ಷಗಳ ಹಿಂದೆ 15 ದಿನದ ಮಗುವಿಗೆ ಆಪರೇಷನ್ | ಯಶಸ್ವಿ ಚಿಕಿತ್ಸೆಯಿಂದ ವೈದ್ಯಕೀಯ ಕ್ಷೇತ್ರದಲ್ಲಿ ಕೆಎಂಸಿ ಸಾಧನೆ

# ಮಿದುಳಿನ ಗಡ್ಡೆ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಬಾಲಕ ವಿದ್ಯಾರ್ಜನೆಗೆ ಸಜ್ಜು

■ ವಿಜಯವಾಣಿ ಸುದ್ದಿಜಾಲ ಉಡುಪಿ

ಮೂರು ವರ್ಷಗಳ ಹಿಂದೆ 15 ದಿನದ ಗಂಡು ಮಗುವಿನ ದೊಡ್ಡ ತಲೆಬುರುಡೆಯೊಳಗೆ ಇದ್ದ ಗಡ್ಡೆಯನ್ನು ಸಂಪೂರ್ಣವಾಗಿ ತೆಗೆದು ಹಾಕುವಲ್ಲಿ ಮಣಿಪಾಲದ ಕೆಎಂಸಿ ವೈದ್ಯರು ಯಶಸ್ವಿಯಾಗಿದ್ದರು. ಇದೀಗ ಆ ಬಾಲಕ ಸಂಪೂರ್ಣ ಚೇತರಿಸಿಕೊಂಡಿದ್ದು, ಆರೋಗ್ಯಕರ ನರಮಂಡಲದ ಬೆಳವಣಿಗೆ ಮೂಲಕ ಶಾಲಾಪೂರ್ವ(ಪ್ರಿಸ್ಕೂಲ್) ಶಿಕ್ಷಣಕ್ಕೆ ಸಿದ್ಧನಾಗಿದ್ದಾನೆ.

ಅತ್ಯಂತ ಕ್ಲಿಷ್ಟಕರವಾಗಿದ್ದ ಈ ಚಿಕಿತ್ಸೆಯನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಆರಂಭಿಕ ಹಂತದ ಚಿಕಿತ್ಸೆ, ವಿಶೇಷ ಶಸ್ತ್ರ ಚಿಕಿತ್ಸಾ ಪರಿಣತಿ ಮತ್ತು ವಿವಿಧ ವಿಭಾಗಗಳ ಸಮನ್ವಯದೊಂದಿಗೆ ನೀಡಿದ್ದ ಆರೈಕೆ ಫಲವಾಗಿ ಬಾಲಕ ಸಂಪೂರ್ಣ ಗುಣಮುಖನಾಗಿದ್ದಾನೆ.

ಜನಿಸಿದ ಮಗುವಿನ ತಲೆಯ ಗಾತ್ರ ದೊಡ್ಡದಾಗಿದ್ದರಿಂದ ಪಾಲಕರು ಕೆಎಂಸಿಗೆ ಕರೆತಂದಿದ್ದರು. ಇದು ನರರೋಗದ ಸಮಸ್ಯೆಯಿರಬಹುದೆಂದು ವೈದ್ಯರು ಊಹಿಸಿದ್ದರು. ಮಿದುಳಿನ ಎಂಆರ್ಐ ಸ್ಕ್ಯಾನ್ ಮಾಡಿದಾಗ ತಲೆಬುರುಡೆಯೊಳಗೆ 'ಹೈಗ್ರೇಡ್'(ತೀವ್ರ ಸ್ವರೂಪ) ಗಡ್ಡೆ ಕಂಡುಬಂತು. ಪಾಲಕರಿಗೆ ವಿಷಯ ತಿಳಿಸಿದ ಡಾ.ರಾಘವೇಂದ್ರ ನಾಯಕ್ ನೇತೃತ್ವದ ನರಶಸ್ತ್ರ ಚಿಕಿತ್ಸಾ ವಿಭಾಗದ ವೈದ್ಯರ ತಂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿತ್ತು.


ಎಂಐಆರ್ ಸ್ಕ್ಯಾನಿಂಗ್‌ನಲ್ಲಿ ಗೋಚರಿಸಿದ ಮಗುವಿನ ತಲೆಯಲ್ಲಿದ್ದ ದೊಡ್ಡ ಗಡ್ಡೆ.

ಶಸ್ತ್ರಚಿಕಿತ್ಸೆ ಬಳಿಕ ಮಗುವನ್ನು ಸೂಕ್ತ ಆರೈಕೆಗಾಗಿ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಯಿತು. ಆರಂಭದಲ್ಲಿ ಸವಾಲುಗಳಿದ್ದರೂ ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿತು. ಬಲುಬೇಗ ಚೇತರಿಕೆ ಕಂಡುಬಂದಿದ್ದರಿಂದ ವಾರದ ನಂತರ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿತ್ತು.



ನವಜಾತ ಶಿಶುವಿಗೆ ಶಸ್ತ್ರಚಿಕಿತ್ಸೆ ಮಾಡುವುದು ತಾಂತ್ರಿಕವಾಗಿ ಅತ್ಯಂತ ಸವಾಲಿನ ಕಾರ್ಯ. ತಲೆಯಲ್ಲಿ ಗಡ್ಡೆ ದೊಡ್ಡದಾಗಿತ್ತು. ಶಿಶುವಿನಲ್ಲಿ ರಕ್ತದ ಪ್ರಮಾಣ ಕಡಿಮೆ ಇರುತ್ತದೆ. ಸ್ವಲ್ಪ ಪ್ರಮಾಣದಲ್ಲಿ ರಕ್ತ ನಷ್ಟವಾದರೂ ಗಂಭೀರ ಪರಿಣಾಮ ಬೀರುತ್ತದೆ. ತುಂಬಾ ಸವಾಲಿದ್ದರೂ ನಾವು ಶಸ್ತ್ರಚಿಕಿತ್ಸೆ ನಡೆಸಲು ನಿರ್ಧರಿಸಿ, ಗಡ್ಡೆಯನ್ನು ಸಂಪೂರ್ಣವಾಗಿ ತೆಗೆಯುವಲ್ಲಿ ಯಶಸ್ವಿಯಾಗಿದ್ದೆವು.

| ಡಾ.ರಾಘವೇಂದ್ರ ನಾಯಕ್
ಕೆಎಂಸಿ ನರಶಸ್ತ್ರ ಚಿಕಿತ್ಸಾ ವಿಭಾಗ ಮುಖ್ಯಸ್ಥ

### ಜನರ ಆರೋಗ್ಯ ರಕ್ಷಣೆಗೆ ಸಂಸ್ಥೆ ಬದ್ಧ

ಡಾ.ಶೀಲಾ ಎಸ್.ಮಥಾಯಿ ನೇತೃತ್ವದ ನವಜಾತ ಶಿಶು ಆರೈಕೆಯ ತಂಡ, ಡಾ.ವಾಸುದೇವ್ ಭಟ್ ನೇತೃತ್ವದ ಮಕ್ಕಳ ಅಂಕೊಲಾಜಿ ಸೇವೆಗಳು ಮತ್ತು ಸಮಗ್ರ ಪುನಶ್ಚೇತನ ಸೌಲಭ್ಯಗಳೊಂದಿಗೆ ಉತ್ತಮ ಆರೈಕೆ ಒದಗಿಸಲಾಗಿತ್ತು. ಈ ಶಸ್ತ್ರಚಿಕಿತ್ಸೆ ನಮ್ಮ ಸಂಸ್ಥೆ ಏನನ್ನು ಸಾಧಿಸಲು ಸ್ಥಾಪಿತವಾಗಿದೆ ಎನ್ನುವುದಕ್ಕೆ ಪ್ರತಿಬಿಂಬವಾಗಿದೆ. ಕಸ್ತೂರ್ಬಾ ಆಸ್ಪತ್ರೆಯು ಇಂತಹ ಸವಾಲುಗಳನ್ನು ಎದುರಿಸಲು ಅವಶ್ಯಕ ಮೂಲಸೌಕರ್ಯ ಹೊಂದಿದೆ. ನಮ್ಮ ವೈದ್ಯರು ಮತ್ತು ಆರೈಕೆ ಸಿಬ್ಬಂದಿ ಬಗ್ಗೆ ನಮಗೆ ತುಂಬ ಹೆಮ್ಮೆಯಿದೆ. ಆ ಬಾಲಕ ಹಾಗೂ ಪಾಲಕರ ಸಂತಸದಲ್ಲಿ ನಾವೂ ಭಾಗಿಗಳಾಗಿದ್ದೇವೆ. ಜನರ ಆರೋಗ್ಯ ರಕ್ಷಣೆಗೆ ಸಂಸ್ಥೆ ಬದ್ಧವಾಗಿದೆ ಎಂದು ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ನಿರ್ವಹಣಾಧಿಕಾರಿ ಡಾ.ಸುಧಾಕರ್ ಕಂಟಿಪುಡಿ ತಿಳಿಸಿದ್ದಾರೆ.

ಸಂಯುಕ್ತ ಕರ್ನಾಟಕ

# 15 ದಿನದ ಹಸುಗೂಸಿನ ಮೆದುಳಿನ ಗೆಡ್ಡೆ ಶಸ್ತ್ರಚಿಕಿತ್ಸೆ

ಉಡುಪಿ: ಕೇವಲ 15 ದಿನಗಳ ಪ್ರಾಯದ ಹಸುಗೂಸಿನ ತಲೆಬುರುಡೆಯೊಳಗಿದ್ದ ಬೃಹತ್ ಮೆದುಳಿನ ಗೆಡ್ಡೆಯನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಯಶಸ್ವಿ ಯಾಗಿ ಸಂಪೂರ್ಣವಾಗಿ ತೆಗೆದುಹಾಕಿದ್ದಾರೆ. ತಲೆಯ ಗಾತ್ರ ಅಸಹಜವಾಗಿ ಹೆಚ್ಚಾದ ಹಿನ್ನೆಲೆಯಲ್ಲಿ ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎಂಆರ್‌ಐ ಪರೀಕ್ಷೆಯಲ್ಲಿ ತಲೆಬುರುಡೆ ಯೊಳಗೆ ದೊಡ್ಡ ಗಾತ್ರದ ದ್ರವ್ಯರಾಶಿ ಪತ್ತೆಯಾಗಿದ್ದು, ತೀವ್ರ ಸ್ವರೂಪದ ಗೆಡ್ಡೆಯ ಸಾಧ್ಯತೆ ಕಂಡುಬಂದಿತ್ತು.

ನವಜಾತ ಶಿಶುವಿನ ರಕ್ತದ ಪ್ರಮಾಣ ಕಡಿಮೆ ಇರುವುದರಿಂದ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದ್ದಾಗಿದ್ದು, ಪೋಷಕರಿಗೆ ಚಿಕಿತ್ಸೆಯ ಅಪಾಯಗಳನ್ನು ವಿವರಿಸಿದ ಬಳಿಕ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದರು. ನರಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ರಾಘವೇಂದ್ರ ನಾಯಕ್ ನೇತೃತ್ವದ ತಂಡ ಯಶಸ್ವಿಯಾಗಿ ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕಿತು.

ಬಳಿಕ ಮಗುವನ್ನು ಎನ್‌ಐಸಿಯು ನಲ್ಲಿರಿಸಿ ತೀವ್ರ ನಿಗಾ ವಹಿಸಲಾಯಿತು. ಒಂದು ವಾರದ ಬಳಿಕ ಆರೋಗ್ಯ ಸ್ಥಿರಗೊಂಡ ಹಿನ್ನೆಲೆಯಲ್ಲಿ ಮಗುವನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

Mangalore Edition

Sep 25, 2026 Page No. 03

ಕನ್ನಡಪ್ರಭ

# ಹದಿನೈದು ದಿನಗಳ ಹಸುಳೆ ತಲೆಯೊಳಗಿದ್ದ ಗೆಡ್ಡೆ ನಿವಾರಣೆ!

## ಕೆಎಂಸಿ ಆಸ್ಪತ್ರೆ ಸಾಧನೆ | ಚಿಕಿತ್ಸೆಯ 3 ವರ್ಷಗಳ ನಂತರ ಶಾಲೆಗೆ ಹೋಗಲು ಸಿದ್ಧವಾದ ಮಗು

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಕೇವಲ 15 ದಿನಗಳ ಹಸುಳೆಯ ತಲೆಬುರುಡೆಯೊಳಗಿದ್ದ ಗಣನೀಯ ಗಾತ್ರ (ಹೈ ಗ್ರೇಡ್) ಗೆಡ್ಡೆಯೊಂದನ್ನು ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು 3 ವರ್ಷಗಳ ಹಿಂದೆ ಶಸ್ತ್ರಚಿಕಿತ್ಸೆ ಮೂಲಕ ತೆಗೆದುಹಾಕಿದ್ದು, ಇಂದು ಆ ಮಗು ಸಂಪೂರ್ಣ ಚೇತರಿಸಿಕೊಂಡು ಪ್ರಿಸ್ಕೂಲ್‌ಗೆ ಹೋಗುವುದಕ್ಕೆ ಸಿದ್ಧನಾಗಿದ್ದಾನೆ.

ಈ ಮಗು ಹುಟ್ಟಿದಾಗ ಅದರ ತಲೆಯ ಗಾತ್ರವು ದೊಡ್ಡದಾಗಿ ಬೆಳೆದಿತ್ತು. ಹುಟ್ಟಿ 15 ದಿನಗಳಲ್ಲಿ ಮಗವನ್ನು ಆಸ್ಪತ್ರೆಗೆ ಕರೆತರಲಾಯಿತು. ಮಗುವಿನ ತಲೆಯ ಎಂಆರ್‌ಐ ಸ್ಕ್ಯಾನ್ ಮಾಡಿದಾಗ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿಯೊಂದು ಪತ್ತೆಯಾಯಿತು. ಮಗು ಕೇವಲ 2 ವಾರಗಳ ಹಸುಳೆಯಾಗಿದ್ದರೂ, ಆ ಗೆಡ್ಡೆಯು ಆಗಲೇ ಅತ್ಯಂತ ದೊಡ್ಡದಾಗಿತ್ತು.

**ಕ್ಲಿಷ್ಟ ಶಸ್ತ್ರ ಚಿಕಿತ್ಸೆ:** ನವಜಾತ ಶಿಶುವಿನಲ್ಲಿ ರಕ್ತದ ಪ್ರಮಾಣವು ಬಹಳ ಕಡಿಮೆ ಇರುತ್ತದೆ, ಜೊತೆಗೆ ತಾಂತ್ರಿಕವಾಗಿ ಶಸ್ತ್ರಚಿಕಿತ್ಸೆ ನಡೆಸುವುದು ಅತ್ಯಂತ ಸವಾಲಾಗಿರುತ್ತದೆ, ಜೊತೆಗೆ ಇಷ್ಟು ದೊಡ್ಡ ಗಾತ್ರದ ಗೆಡ್ಡೆಯಿರುವಾಗ ಈ ಸವಾಲು ಇನ್ನಷ್ಟು ಹೆಚ್ಚಾಗಿತ್ತು.

ಕೊನೆಗೆ ಹೆತ್ತವರಿಗೆ ಸಂಪೂರ್ಣ ಅರಿವು ಮೂಡಿಸಿ ಶಸ್ತ್ರಚಿಕಿತ್ಸೆಯನ್ನು ನಡೆಸಲಾಯಿತು. ನರರೋಗ ಶಸ್ತ್ರಚಿಕಿತ್ಸಕರು ಗೆಡ್ಡೆ ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಆರಂಭದಲ್ಲಿ ಸವಾಲುಗಳಿದ್ದರೂ, ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿತು, ಶಸ್ತ್ರಚಿಕಿತ್ಸೆ ನಡೆದ ಒಂದು ವಾರದ ನಂತರ ಮಗುವನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಕಳೆದ 3 ವರ್ಷಗಳಿಂದ ಆ ಮಗುವನ್ನು ನಿಯಮಿತವಾಗಿ ಪರಿಶೀಲನೆಗೆ ಒಳಪಡಿಸಲಾಗಿದ್ದು, ಆಸ್ಪತ್ರೆಯ ಡಾ. ರಾಘವೇಂದ್ರ ನಾಯಕ್ ನೇತೃತ್ವದ ನರಶಸ್ತ್ರಚಿಕಿತ್ಸಾ ವಿಭಾಗವು, ಡಾ. ಶೀಲಾ ಎಸ್. ಮಥಾಯಿ ನೇತೃತ್ವದ ನವಜಾತ ಶಿಶು ಆರೈಕೆ ತಂಡ, ಡಾ. ವಾಸುದೇವ್ ಭಟ್ ನೇತೃತ್ವದ ಮಕ್ಕಳ ಆಂಕೊಲಾಜಿ ಸೇವೆಗಳು ಮತ್ತು ಸಮಗ್ರ ಪುನಶ್ಚೇತನ ಸೌಲಭ್ಯಗಳೊಂದಿಗೆ ಮಗು ಸಂಪೂರ್ಣ ಗುಣಮುಖವಾಗಿ ಉತ್ಸಾಹಭರಿತವಾಗಿದ್ದು ಪೂರ್ವ-ಪ್ರಾಥಮಿಕ ಶಾಲೆಗೆ ಹೋಗಲು ಸಿದ್ಧವಾಗಿದೆ.

ಡಾ. ರಾಘವೇಂದ್ರ ನಾಯಕ್ ಅವರು, ಶಸ್ತ್ರಚಿಕಿತ್ಸೆಯ ಸವಾಲಿನ ಜೊತೆಗೆ ಆತಂಕಗೊಂಡಿರುವ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ ಸಮಾಧಾನಪಡಿಸುವುದು ಕೂಡ ಅತ್ಯಂತ ಕಠಿಣ ಕೆಲಸವಾಗಿತ್ತು ಎಂದು ತಿಳಿಸಿದ್ದಾರೆ.

MANGALORE Edition
Sep 25, 2026 Page No. 05
Powered by: erelego.com

25-9-2026
UDAYAVANI - MANIPAL

### ಮಣಿಪಾಲ ಕೆಎಂಸಿ ಆಸ್ಪತ್ರೆಯ ವೈದ್ಯರಿಂದ ಯಶಸ್ವಿ ಶಸ್ತ್ರ ಚಿಕಿತ್ಸೆ

# 15 ದಿನಗಳ ಹಸುಗೂಸಿನ ಮೆದುಳಿನ ಗೆಡ್ಡೆ ತೆರವು

**ವಿಕ ಸುದ್ದಿಲೋಕ** ಉಡುಪಿ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯರು 15 ದಿನಗಳ ಹಸುಳೆಯ ತಲೆಬುರುಡೆಯೊಳಗಿನ ದೊಡ್ಡ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆಯ ಮೂಲಕ ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾಗಿದ್ದಾರೆ.

ಮೂರು ವರ್ಷಗಳ ನಂತರ ಆ ಮಗು ಆರೋಗ್ಯಕರ ನರಮಂಡಲದ ಬೆಳವಣಿಗೆಯನ್ನು ಹೊಂದಿದ್ದು, ಈಗ ಶಾಲಾಪೂರ್ವ ಶಿಕ್ಷಣಕ್ಕೆ(ಪ್ರಿಸ್ಕೂಲ್) ಸಿದ್ಧವಾಗಿದೆ. ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಶಿಶುವನ್ನು ಆಸ್ಪತ್ರೆಗೆ ಕರೆತರಲಾಗಿತ್ತು.

ಮಗು ಗಂಭೀರ ನರರೋಗದ ಸಮಸ್ಯೆ ಹೊಂದಿರುವ ಸೂಚನೆಯಾಗಿತ್ತು. ಮೆದುಳಿನ ಎಂಆರ್‌ಐ ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ಗಾತ್ರದ 'ಹೈ- ಗ್ರೇಡ್' ಗೆಡ್ಡೆಯಾಗಿರುವ ಸಾಧ್ಯತೆಯನ್ನು ಬಲವಾಗಿ ಸೂಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ವೈದ್ಯಕೀಯ ತಂಡಕ್ಕೆ ಇದು ಅಸಾಧಾರಣ ಸವಾಲಾಗಿ ಪರಿಣಮಿಸಿತ್ತು. ಈ ವಯಸ್ಸಿನ ಮಗುವಿನಲ್ಲಿ ರಕ್ತದ ಪ್ರಮಾಣವು ಬಹಳ ಕಡಿಮೆಯಿರುವುದರಿಂದ, ಸ್ವಲ್ಪವೇ ರಕ್ತ ನಷ್ಟವಾದರೂ ಅದು ಗಂಭೀರ ಪರಿಣಾಮ ಬೀರಬಹುದು. ಹೀಗಾಗಿ, ಶಸ್ತ್ರಚಿಕಿತ್ಸೆ ನಡೆಸುವುದು ಹಾಗೂ ಆತಂಕಗೊಂಡಿರುವ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ ಸಂಪೂರ್ಣ ಅರಿವು ಮೂಡಿಸಿದ ನಂತರ, ವೈದ್ಯಕೀಯ ತಂಡ ಶಸ್ತ್ರಚಿಕಿತ್ಸೆಯನ್ನು ಮುಂದುವರಿಸಲು ನಿರ್ಧರಿಸಿತು. ನಿರೀಕ್ಷೆಯಂತೆಯೇ ಈ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದಾಗಿತ್ತು.

ಆದರೂ ನರರೋಗ ಶಸ್ತ್ರಚಿಕಿತ್ಸಕರು ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಶಸ್ತ್ರಚಿಕಿತ್ಸೆಯ ನಂತರ, ಮಗುವನ್ನು ಸೂಕ್ತ ಆರೈಕೆಗಾಗಿ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ(KMAW) ಸ್ಥಳಾಂತರಿಸಲಾಯಿತು. ಆರಂಭದಲ್ಲಿ ಸವಾಲುಗಳಿದ್ದರೂ, ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿತು. ಶಸ್ತ್ರಚಿಕಿತ್ಸೆ ನಡೆದ ಒಂದು ವಾರದ ನಂತರ ಮಗುವನ್ನು ಸ್ಥಿರವಾದ ಆರೋಗ್ಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಮಗುವಿನ ನರಮಂಡಲದ ಬೆಳವಣಿಗೆ ಮತ್ತು ಒಟ್ಟಾರೆ ಬೆಳವಣಿಗೆಯನ್ನು ತಂಡವು ಸೂಕ್ಷ್ಮವಾಗಿ ಗಮನಿಸುತ್ತಾ, ನಿಯಮಿತವಾಗಿ ಪರಿಶೀಲನೆಗೆ ಒಳಪಡಿಸುತ್ತಾ ಬಂದಿದೆ. ಮೂರು ವರ್ಷಗಳ ನಂತರ, ಮಗು ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದ್ದು, ಈಗ ತನ್ನ ಮುಂದಿನ ಮಹತ್ವದ ಹೆಜ್ಜೆಯಾದ 'ಪ್ರಿಸ್ಕೂಲ್'(ಪೂರ್ವ- ಪ್ರಾಥ ಮಿಕ ಶಾಲೆ) ಗೆ ಹೋಗಲು ಸಿದ್ಧವಾಗಿದೆ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಡಾ.ರಾಘವೇಂದ್ರ ನಾಯಕ್ ನೇತೃತ್ವದ ನರಶಸ್ತ್ರ ಚಿಕಿತ್ಸಾ ವಿಭಾಗ, ಡಾ. ಶೀಲಾ ಎಸ್. ಮಥಾಯಿ ನೇತೃತ್ವದ ನವಜಾತ ಶಿಶು ಆರೈಕೆ ತಂಡ, ಡಾ.ವಾಸುದೇವ್ ಭಟ್ ನೇತೃತ್ವದ ಮಕ್ಕಳ ಆಂಕೊಲಾಜಿ ಸೇವೆಗಳು ಮತ್ತು ಸಮಗ್ರ ಪುನಶ್ಚೇತನ ಸೌಲಭ್ಯಗಳೊಂದಿಗೆ ಈ ಆರೈಕೆಯನ್ನು ಒದಗಿಸಲಾಗಿದೆ.

ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ನಿರ್ವಹಣಾಧಿಕಾರಿ ಅಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಆಸ್ಪತ್ರೆಯ ವೈದ್ಯರ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

- **TULUNADU VARTHE**
  **LINK:** https://tulunaduvarthe.com/doctors-at-kasturba-hospital-manipal-have-successfully-removed-a-large-brain-tumor-from-a-15-day-old-infant/

ಮಣಿಪಾಲ

# ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ವೈದ್ಯರು 15 ದಿನಗಳ ಹಸುಗೂಸಿನಲ್ಲಿದ್ದ ದೊಡ್ಡ ಮೆದುಳಿನ ಗೆಡ್ಡೆಯನ್ನು ಯಶಸ್ವಿಯಾಗಿ ತೆಗೆದುಹಾಕಿದ್ದಾರೆ

By **TNVOffice** - September 24, 2026 0





ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಪ್ರಾಯದ ಶಿಶುವನ್ನು ಆಸ್ಪತ್ರೆಗೆ ಕರೆತರಲಾಯಿತು; ಇದು ಯಾವುದಾದರೂ ಗಂಭೀರ ನರರೋಗದ ಸಮಸ್ಯೆಯಿರುವ ಕುರಿತು ತಕ್ಷಣದ ಆತಂಕವನ್ನು ಉಂಟುಮಾಡಿತು. ಮೆದುಳಿನ ಎಂಆರ್‌ಐ (MRI) ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿಯೊಂದು (mass) ಕಂಡುಬಂದಿದ್ದು, ಅದು 'ಹೈ-ಗ್ರೇಡ್' (ತೀವ್ರ ಸ್ವರೂಪದ) ಗೆಡ್ಡೆಯಾಗಿರುವ ಸಾಧ್ಯತೆಯನ್ನು ಬಲವಾಗಿ ಸೂಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ವೈದ್ಯಕೀಯ ತಂಡಕ್ಕೆ ಇದರ ರೋಗನಿರ್ಣಯವು ಒಂದು ಅಸಾಧಾರಣ ಸವಾಲಾಗಿ ಪರಿಣಮಿಸಿತು: ಏಕೆಂದರೆ ರೋಗಿಯು ಕೇವಲ ಎರಡು ವಾರಗಳ ಹಸುಳೆಯಾಗಿದ್ದರೂ, ಆ ಗೆಡ್ಡೆಯು ಆಗಲೇ ಅತ್ಯಂತ ದೊಡ್ಡದಾಗಿತ್ತು.

**KARAVALI TIMES**

**LINK:** https://www.karavalitimes.news/2026/09/ud15.html?m=1



CELEBRATE THE BEAUTY OF LIFE



# 15 ದಿನದ ಹಸುಗೂಸಿನ ಮೆದುಳಿನ ಬೃಹತ್ ಗೆಡ್ಡೆ ಯಶಸ್ವಿಯಾಗಿ ತೆಗೆದ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ವೈದ್ಯರು

9/24/2026 03:22:00 PM



ಮಣಿಪಾಲ, ಸೆ.24: ಕೇವಲ 15 ದಿನಗಳ ಪ್ರಾಯದಲ್ಲಿದ್ದ ಹಸುಗೂಸಿನ ತಲೆಬುರುಡೆಯೊಳಗಿದ್ದ ಬೃಹತ್ ಮೆದುಳಿನ ಗೆಡ್ಡೆಯನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ನರಶಸ್ತ್ರಚಿಕಿತ್ಸಕರು ಯಶಸ್ವಿಯಾಗಿ ಸಂಪೂರ್ಣವಾಗಿ ತೆಗೆದುಹಾಕಿದ್ದಾರೆ. ಶಸ್ತ್ರಚಿಕಿತ್ಸೆಯ ಬಳಿಕ ನಿರಂತರ ವೈದ್ಯಕೀಯ ಮೇಲ್ವಿಚಾರಣೆ ಹಾಗೂ ಆರೈಕೆಯಿಂದ ಮಗು ಇದೀಗ ಮೂರು ವರ್ಷದ ಆರೋಗ್ಯವಂತ ಬಾಲಕನಾಗಿ ಬೆಳೆದಿದ್ದು, ಪ್ರಿಸ್ಕೂಲ್ ಶಿಕ್ಷಣಕ್ಕೆ ಸಿದ್ಧವಾಗಿದೆ.

ತಲೆಯ ಗಾತ್ರ ಅಸಹಜವಾಗಿ ದೊಡ್ಡದಾಗಿದ್ದ ಕಾರಣ 15 ದಿನದ ಶಿಶುವನ್ನು ಕಸ್ತೂರ್ಬಾ ಆಸ್ಪತ್ರೆಗೆ ಕರೆತರಲಾಗಿತ್ತು. ಎಂಆರ್‌ಐ ಪರೀಕ್ಷೆಯಲ್ಲಿ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿ ಕಂಡುಬಂದಿದ್ದು, ಅದು ತೀವ್ರ ಸ್ವರೂಪದ ಗೆಡ್ಡೆಯಾಗಿರುವ ಸಾಧ್ಯತೆ ವ್ಯಕ್ತವಾಗಿತ್ತು. ನವಜಾತ ಶಿಶುವಿನ ರಕ್ತದ ಪ್ರಮಾಣ ಅತ್ಯಂತ ಕಡಿಮೆ ಇರುವುದರಿಂದ ಶಸ್ತ್ರಚಿಕಿತ್ಸೆ ವೇಳೆ ಅಲ್ಪ ಪ್ರಮಾಣದ ರಕ್ತ ನಷ್ಟವೂ ಗಂಭೀರ ಪರಿಣಾಮ ಉಂಟುಮಾಡುವ ಸಾಧ್ಯತೆ ಇತ್ತು.

ಅಪಾಯಗಳ ಕುರಿತು ಪೋಷಕರಿಗೆ ವಿವರಿಸಿ, ಅವರ ಒಪ್ಪಿಗೆ ಬಳಿಕ ವೈದ್ಯಕೀಯ ತಂಡ ಶಸ್ತ್ರಚಿಕಿತ್ಸೆ ನಡೆಸಿತು. ಅತ್ಯಂತ ಕ್ಲಿಷ್ಟಕರವಾಗಿದ್ದ ಶಸ್ತ್ರಚಿಕಿತ್ಸೆಯಲ್ಲಿ ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ನರಶಸ್ತ್ರಚಿಕಿತ್ಸಕರು ಯಶಸ್ವಿಯಾದರು. ಬಳಿಕ ಮಗುವನ್ನು ಎನ್‌ಐಸಿಯುನಲ್ಲಿ ಇರಿಸಿ ತೀವ್ರ ನಿಗಾ ವಹಿಸಲಾಯಿತು. ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿದ ಮಗು ಒಂದು ವಾರದ ಬಳಿಕ ಸ್ಥಿರ ಆರೋಗ್ಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾಯಿತು.

ನಂತರ ಮಗುವಿನ ನರಮಂಡಲ ಹಾಗೂ ದೈಹಿಕ ಬೆಳವಣಿಗೆಯನ್ನು ವೈದ್ಯಕೀಯ ತಂಡ ನಿಯಮಿತವಾಗಿ ಪರಿಶೀಲಿಸುತ್ತಿತ್ತು. ಮೂರು ವರ್ಷಗಳ ಬಳಿಕ ಮಗು ಆರೋಗ್ಯಕರ ಬೆಳವಣಿಗೆ ಹೊಂದಿದ್ದು, ಇದೀಗ ಪ್ರಿಸ್ಕೂಲ್‌ಗೆ ತೆರಳಲು ಸಿದ್ಧವಾಗಿದೆ.

ಈ ಚಿಕಿತ್ಸೆಯಲ್ಲಿ ನರಶಸ್ತ್ರಚಿಕಿತ್ಸೆ, ನವಜಾತ ಶಿಶು ಆರೈಕೆ, ಮಕ್ಕಳ ಆಂಕೊಲಾಜಿ, ತೀವ್ರ ನಿಗಾ ಹಾಗೂ ಪುನಶ್ಚೇತನ ವಿಭಾಗಗಳು ಸಮನ್ವಯದಿಂದ ಕಾರ್ಯನಿರ್ವಹಿಸಿವೆ. ನರಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ರಾಘವೇಂದ್ರ ನಾಯಕ, ನವಜಾತ ಶಿಶು ಆರೈಕೆ ತಂಡದ ಡಾ. ಶೀಲಾ ಎಸ್. ಮಥಾಯಿ ಹಾಗೂ ಮಕ್ಕಳ ಆಂಕೊಲಾಜಿ ವಿಭಾಗದ ಡಾ. ವಾಸುದೇವ್ ಭಟ್ ಸೇರಿದಂತೆ ವಿವಿಧ ತಜ್ಞರು ಚಿಕಿತ್ಸೆಯಲ್ಲಿ ಭಾಗಿಯಾಗಿದ್ದರು.

**UDAYAVANI.COM**

**LINK:** https://uvnews.in/44c3mxt

KARNATAKA SEP 24, 2026, 5:04 PM IST

## Kasturba Hospital, Manipal, successfully removes large brain tumour in **15**-day-old newborn

Surgeons achieved complete excision of a large intracranial tumour in a 15-day-old newborn. Three years later, the child is showing healthy neurological development and is ready to start preschool.



Manipal: A child who underwent major brain surgery at the age of just 15 days is now a healthy three-year-old preparing to start preschool, following early intervention, specialised surgical expertise and coordinated multidisciplinary care at Kasturba Hospital, Manipal.

The baby was brought to the hospital at 15 days of age with a markedly enlarged head, raising immediate concern about an underlying neurological condition. An MRI scan of the brain revealed a large intracranial mass, highly suggestive of a high-grade tumour. For the treating team, the diagnosis presented an exceptional challenge as the patient was barely two weeks old and the tumour was already very large.

Operating on a newborn is technically demanding, particularly when dealing with a tumour of this size. Since a baby of this age has a very small blood volume, even a relatively small amount of blood loss can have serious consequences. This made both the surgery and counselling of the anxious parents challenging. After the parents understood the risks involved, the medical team decided to proceed with the surgery.

The operation proved as difficult as anticipated, but the neurosurgeons achieved complete excision of the tumour. Following the surgery, the infant was shifted to the Neonatal Intensive Care Unit (NICU) for intensive postoperative care. The baby responded well and showed steady signs of recovery before being discharged in a stable condition a week after the operation.

**VIJAYAVANI.NET**

**LINK:** https://www.vijayavani.net/district/udupi/kmc-doctors-in-udupi-manipal-remove-a-huge-tumor-from-a-childs-brain-3-year-old-boy-ready-for-his-education

ಉಡುಪಿ

# ಮಿದುಳಿನಲ್ಲಿದ್ದ ಗಡ್ಡೆ ತೆರವು, ಶಿಕ್ಷಣಕ್ಕೆ ಸಜ್ಜಾದ ಬಾಲಕ



ಎಂಆರ್ಐ ಸ್ಕ್ಯಾನಿಂಗ್‌ನಲ್ಲಿ ಗೋಚರಿಸಿದ ಮಗುವಿನ ತಲೆಯಲ್ಲಿದ್ದ ದೊಡ್ಡ ಗಡ್ಡೆ. ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿದ್ದ ಉಡುಪಿ ಮಣಿಪಾಲದ ಕೆಎಂಸಿ ನರಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ರಾಘವೇಂದ್ರ ನಾಯಕ್.

Published on: 24 Sep 2026, 5:54 pm

## ಮಣಿಪಾಲದ ಕೆಎಂಸಿ ವೈದ್ಯರ ಯಶಸ್ವಿ ಚಿಕಿತ್ಸೆ

## 3 ವರ್ಷದ ಹಿಂದೆ 15 ದಿನದ ಮಗುವಿಗೆ ಶಸ್ತ್ರಚಿಕಿತ್ಸೆ

**ಉಡುಪಿ:** ಮೂರು ವರ್ಷದ ಹಿಂದೆ 15 ದಿನದ ಗಂಡು ಮಗುವಿನ ದೊಡ್ಡದಾದ ತಲೆಬುರುಡೆಯೊಳಗೆ ಇದ್ದ ಗಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಮಣಿಪಾಲದ ಕೆಎಂಸಿ ವೈದ್ಯರು ಯಶಸ್ವಿಯಾಗಿದ್ದರು. ಇದೀಗ ಆ ಬಾಲಕ ಸಂಪೂರ್ಣ ಚೇತರಿಸಿಕೊಂಡಿದ್ದು, ಆರೋಗ್ಯಕರ ನರಮಂಡಲದ ಬೆಳವಣಿಗೆ ಮೂಲಕ ಶಾಲಾಪೂರ್ವ (ಪ್ರಿಸ್ಕೂಲ್) ಶಿಕ್ಷಣಕ್ಕೆ ಸಿದ್ಧವಾಗಿದ್ದಾನೆ.

ಅತ್ಯಂತ ಕ್ಲಿಷ್ಟಕರವಾಗಿದ್ದ ಈ ಚಿಕಿತ್ಸೆಯನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಆರಂಭಿಕ ಹಂತದ ಚಿಕಿತ್ಸೆ, ವಿಶೇಷ ಶಸ್ತ್ರ ಚಿಕಿತ್ಸಾ ಪರಿಣತಿ ಮತ್ತು ವಿವಿಧ ವಿಭಾಗಗಳ ಸಮನ್ವಯದೊಂದಿಗೆ ನೀಡಿದ್ದ ಆರೈಕೆಯ ಫಲವಾಗಿ ಬಾಲಕ ಸಂಪೂರ್ಣ ಗುಣಮುಖನಾಗಿದ್ದಾನೆ.

### ದೊಡ್ಡ ತಲೆ ಹೊಂದಿದ್ದ ಮಗು

ಜನಿಸಿದ ಮಗುವಿನ ತಲೆಯ ಗಾತ್ರವು ದೊಡ್ಡದಾಗಿದ್ದರಿಂದ ಪಾಲಕರು ಕೆಎಂಸಿಗೆ ಕರೆತಂದಿದ್ದರು. ಇದು ನರರೋಗದ ಸಮಸ್ಯೆಯಿರಬಹುದೆಂದು ವೈದ್ಯರು ಊಹಿಸಿದ್ದರು. ಬಳಿಕ ಮಿದುಳಿನ ಎಂಆರ್ಐ ಸ್ಕ್ಯಾನ್ ಮಾಡಿದಾಗ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿ ಹೊಂದಿದ್ದ ಬೃಹತ್ ಗಡ್ಡೆ ಕಂಡುಬಂತು. ಅದು 'ಹೈಗ್ರೇಡ್' (ತೀವ್ರ ಸ್ವರೂಪ) ಗಡ್ಡೆಯಾಗಿತ್ತು. ಮಗುವಿಗೆ ಕೇವಲ 15 ದಿನವಾಗಿದ್ದು, ತಲೆಯಲ್ಲಿ ಅಷ್ಟೊಂದು ದೊಡ್ಡ ಗಡ್ಡೆ ಬೆಳೆದಿರುವುದು ವೈದ್ಯರಿಗೂ ಸವಾಲಾಗಿ ಪರಿಣಮಿಸಿತ್ತು.

**KARAVALI NEWS**

**LINK:** https://karavalinews.com/medical-community-amazed-by-manipals-kasturba-hospitals-achievement-doctors-surgically-remove-brain-tumor-from-a-15-day-old-infant/

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಸಾಧನೆಗೆ ನಿಬ್ಬೆರಗಾದ ವೈದ್ಯಲೋಕ: ಕೇವಲ 15 ದಿನಗಳ ಮಗುವಿನ ಮೆದುಳಿನ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದ ವೈದ್ಯರು



*ಮಣಿಪಾಲ, ಸೆ.,24: ಕೇವಲ 15 ದಿನಗಳ ಮಗುವಿನ ಮೆದುಳಿನಲ್ಲಿದ್ದ ದೊಡ್ಡ ಗೆಡ್ಡೆಯನ್ನು ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ನುರಿತ ವೈದ್ಯರ ತಂಡ ಶಸ್ತ್ರಚಿಕಿತ್ಸೆ ನಡೆಸಿ ವೈದ್ಯಕೀಯ ಕ್ಷೇತ್ರದಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆವೈದ್ಯರ ಅತ್ಯಂತ ಅಪಾಯಕಾರಿ ಹಾಗೂ ಅಪರೂಪದ ಸಾಧನೆಗೆ ಇಡೀ ವೈದ್ಯಲೋಕ ನಿಬ್ಬೆರಗಾಗಿದೆ..*

*ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಪ್ರಾಯದ ಶಿಶುವನ್ನು ಆಸ್ಪತ್ರೆಗೆ ಕರೆತರಲಾಗಿತ್ತು. ಇದು ಯಾವುದಾದರೂ ಗಂಭೀರ ನರರೋಗದ ಸಮಸ್ಯೆಯಿರುವ ಕುರಿತು ತಕ್ಷಣದ ಆತಂಕವನ್ನು ಉಂಟುಮಾಡಿತು. ಮೆದುಳಿನ MRI ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿಯೊಂದು ಕಂಡುಬಂದಿದ್ದು, ಅದು 'ಹೈ-ಗ್ರೇಡ್' ಗೆಡ್ಡೆಯಾಗಿತ್ತು. 15 ದಿನಗಳ ನವಜಾತ ಶಿಶುವಿಗೆ ಶಸ್ತ್ರಚಿಕಿತ್ಸೆ ನಡೆಸುವುದು ತಾಂತ್ರಿಕವಾಗಿ ಅತ್ಯಂತ ಸವಾಲಿನ ಕೆಲಸವಾಗಿತ್ತು.ಅದರಲ್ಲೂ ಇಷ್ಟು ದೊಡ್ಡ ಗಾತ್ರದ ಗೆಡ್ಡೆಯಿರುವಾಗ ಈ ಸವಾಲು ಇನ್ನಷ್ಟು ಹೆಚ್ಚಿರುತ್ತದೆ. ಈ ವಯಸ್ಸಿನ ಮಗುವಿನಲ್ಲಿ ರಕ್ತದ ಪ್ರಮಾಣವು ಬಹಳ ಕಡಿಮೆಯಿರುವುದರಿಂದ, ಸ್ವಲ್ಪವೇ ರಕ್ತ ನಷ್ಟವಾದರೂ ಅದು ಗಂಭೀರ ಪರಿಣಾಮಗಳನ್ನು ಬೀರುವ ಸಾಧ್ಯತೆಯಿತ್ತು. ಹೀಗಾಗಿ, ಶಸ್ತ್ರಚಿಕಿತ್ಸೆ ನಡೆಸುವುದು ಹಾಗೂ ಆತಂಕಗೊಂಡಿರುವ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ ಸಮಾಧಾನಪಡಿಸುವುದು ಇವೆರಡೂ ಅತ್ಯಂತ ಕಠಿಣವಾಗಿತ್ತು.*

*ಇದರಲ್ಲಿರುವ ಅಪಾಯಗಳ ಬಗ್ಗೆ ಹೆತ್ತವರಿಗೆ ಸಂಪೂರ್ಣ ಅರಿವು ಮೂಡಿಸಿದ ನಂತರ, ವೈದ್ಯಕೀಯ ತಂಡವು ಶಸ್ತ್ರಚಿಕಿತ್ಸೆಯನ್ನು ಮುಂದುವರಿಸಲು ನಿರ್ಧರಿಸಿತು.ಯಾಕೆಂದರೆ ಈ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದಾಗಿತ್ತು, ಆದರೂ ನರರೋಗ ಶಸ್ತ್ರಚಿಕಿತ್ಸಕರು ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಶಸ್ತ್ರಚಿಕಿತ್ಸೆಯ ನಂತರ, ಮಗುವನ್ನು ಸೂಕ್ತ ಆರೈಕೆಗಾಗಿ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ (NICU) ಸ್ಥಳಾಂತರಿಸಲಾಯಿತು. ಆರಂಭದಲ್ಲಿ ಸವಾಲುಗಳಿದ್ದರೂ, ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿದೆ. ಚಿಕಿತ್ಸೆ ನಡೆದ ಒಂದು ವಾರದ ಬಳಿಕ ಮಗುವನ್ನು ಸ್ಥಿರವಾದ ಆರೋಗ್ಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.*

**DAIJIWORLD.COM**

**LINK:** https://share.google/MgGpUlsKDvLpacuo7

# Kasturba Hospital, Manipal, saves newborn after high-risk brain tumour surgery at 15 days

Thu, Sep 24 2026 05:19:08 PM By Daijiworld Media Network

*Media Release*

**Udupi, Sept 24:** A child who underwent major brain surgery at just 15 days old is today a healthy, cheerful three-year-old preparing to start preschool, following early intervention, specialised surgical expertise and coordinated multidisciplinary care at Kasturba Hospital, Manipal.

The baby was brought to the hospital at 15 days of age with a markedly enlarged head, raising immediate concern about an underlying neurological condition. An MRI scan of the brain revealed a large intracranial mass, highly suggestive of a high-grade tumour.



For the treating team, the diagnosis posed an exceptional challenge: the patient was barely two weeks old, and the tumour was already very large.

Operating on a newborn is technically demanding under any circumstances, and even more so when dealing with a tumour of this size. Because a baby of this age has a very small blood volume, even a relatively small amount of blood loss can have serious consequences, making both the surgery and counselling the anxious parents a formidable undertaking. With the parents' full understanding of the risks involved, the team decided to proceed.

**DHRISHYA NEWS**

**LINK**: https://www.dhrishyanews.com/?p=39115

# 15 ದಿನಗಳ ಹಸುಗೂಸಿನ ಮೆದುಳಿನ ಬೃಹತ್ ಗೆಡ್ಡೆ ಯಶಸ್ವಿ ಶಸ್ತ್ರಚಿಕಿತ್ಸೆ: 3 ವರ್ಷಗಳ ಬಳಿಕ ಪ್ರಿಸ್ಕೂಲ್‌ಗೆ ಸಜ್ಜಾದ ಮಗು..!

by Dhrishya News – 24/09/2026 in ಸುದ್ದಿಗಳು 0



0 SHARES 29 VIEWS

ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ವೈದ್ಯರು 15 ದಿನಗಳ ಹಸುಗೂಸಿನಲ್ಲಿದ್ದ ದೊಡ್ಡ ಮೆದುಳಿನ ಗೆಡ್ಡೆಯನ್ನು ಯಶಸ್ವಿಯಾಗಿ ತೆಗೆದುಹಾಕಿದ್ದಾರೆ.

ಶಸ್ತ್ರಚಿಕಿತ್ಸಕರು 15 ದಿನಗಳ ಹಸುಳೆಯಲ್ಲಿದ್ದ ದೊಡ್ಡದಾದ ತಲೆಬುರುಡೆಯೊಳಗಿನ ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಮೂರು ವರ್ಷಗಳ ನಂತರ, ಆ ಮಗು ಆರೋಗ್ಯಕರ ನರಮಂಡಲದ ಬೆಳವಣಿಗೆಯನ್ನು ಹೊಂದಿದ್ದು, ಈಗ ಶಾಲಾಪೂರ್ವ ಶಿಕ್ಷಣಕ್ಕೆ (ಪ್ರಿಸ್ಕೂಲ್) ಸಿದ್ಧವಾಗಿದೆ.

ಮಣಿಪಾಲ, 24 ಸೆಪ್ಟೆಂಬರ್ 2026 – ಕೇವಲ 15 ದಿನಗಳ ಪ್ರಾಯದಲ್ಲಿದ್ದಾಗ ಮೆದುಳಿನ ಪ್ರಮುಖ ಶಸ್ತ್ರಚಿಕಿತ್ಸೆಗೆ ಒಳಗಾದ ಮಗುವೊಂದು ಇಂದು ಆರೋಗ್ಯವಂತ ಹಾಗೂ ಉತ್ಸಾಹಭರಿತ ಮೂರು ವರ್ಷದ ಬಾಲಕನಾಗಿ ಬೆಳೆದಿದ್ದು, ಶಾಲಾ ಪೂರ್ವ ಶಿಕ್ಷಣವನ್ನು (ಪ್ರಿಸ್ಕೂಲ್) ಪ್ರಾರಂಭಿಸಲು ಸಿದ್ಧನಾಗಿದ್ದಾನೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿನ ಆರಂಭಿಕ ಹಂತದ ಚಿಕಿತ್ಸೆ, ವಿಶೇಷ ಶಸ್ತ್ರಚಿಕಿತ್ಸಾ ಪರಿಣತಿ ಮತ್ತು ವಿವಿಧ ವಿಭಾಗಗಳ ಸಮನ್ವಯದೊಂದಿಗೆ ನೀಡಲಾದ ಆರೈಕೆಯ ಫಲವಾಗಿ ಇದು ಸಾಧ್ಯವಾಗಿದೆ.

ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಪ್ರಾಯದ ಶಿಶುವನ್ನು ಆಸ್ಪತ್ರೆಗೆ ಕರೆತರಲಾಯಿತು; ಇದು ಯಾವುದಾದರೂ ಗಂಭೀರ ನರರೋಗದ ಸಮಸ್ಯೆಯಿರುವ ಕುರಿತು ತಕ್ಷಣದ ಆತಂಕವನ್ನು ಉಂಟುಮಾಡಿತು. ಮೆದುಳಿನ ಎಂಆರ್‌ಐ (MRI) ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿಯೊಂದು (mass) ಕಂಡುಬಂದಿದ್ದು, ಅದು 'ಹೈ-ಗ್ರೇಡ್' (ತೀವ್ರ ಸ್ವರೂಪದ) ಗೆಡ್ಡೆಯಾಗಿರುವ ಸಾಧ್ಯತೆಯನ್ನು ಬಲವಾಗಿ ಸೂಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ವೈದ್ಯಕೀಯ ತಂಡಕ್ಕೆ ಇದರ ರೋಗನಿರ್ಣಯವು ಒಂದು ಅಸಾಧಾರಣ ಸವಾಲಾಗಿ ಪರಿಣಮಿಸಿತು: ಏಕೆಂದರೆ ರೋಗಿಯು ಕೇವಲ ಎರಡು ವಾರಗಳ ಹಸುಳೆಯಾಗಿದ್ದರೂ, ಆ ಗೆಡ್ಡೆಯು ಆಗಲೇ ಅತ್ಯಂತ ದೊಡ್ಡದಾಗಿತ್ತು.

**KEMMANNU.COM**

**LINK:** https://kemmannu.com/index.php?action=topstory&type=30310

Manipal, 24 September 2026 — A child who underwent major brain surgery when he was just 15 days old is today a healthy, cheerful three-year-old preparing to start preschool, the outcome of early intervention, specialized surgical expertise, and coordinated multidisciplinary care at Kasturba Hospital, Manipal.



The baby was brought to the hospital at 15 days of age with a markedly enlarged head, raising immediate concern about an underlying neurological condition. An MRI scan of the brain revealed a large intracranial mass, highly suggestive of a high-grade tumor. For the treating team, the diagnosis posed an exceptional challenge: the patient was barely two weeks old, and the tumor was already very large.

Operating on a newborn is technically demanding under any circumstances, and far more so with a tumor of this size. Because a baby of this age has a very small blood volume, even a relatively small amount of blood loss can have serious consequences, making both the surgery and the counseling of anxious parents a formidable undertaking. With the parents' full understanding of the risks involved, the team decided to proceed.

**NAMMA UDUPI BULLETIN**

**LINK:** https://share.google/a5bivJtgOi5UCZqIJ



15 ದಿನಗಳ ಹಸುಗೂಸಿನಲ್ಲಿದ್ದ ದೊಡ್ಡ ಮೆದುಳಿನ ಗೆಡ್ಡೆಯನ್ನು ಯಶಸ್ವಿಯಾಗಿ ತೆಗೆದುಹಾಕಿದ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ವೈದ್ಯರು

**ಮಣಿಪಾಲ, ಸೆ. 24:** ಕೇವಲ 15 ದಿನಗಳ ಪ್ರಾಯದಲ್ಲಿದ್ದಾಗ ಮೆದುಳಿನ ಪ್ರಮುಖ ಶಸ್ತ್ರಚಿಕಿತ್ಸೆಗೆ ಒಳಗಾದ ಮಗುವೊಂದು ಇಂದು ಆರೋಗ್ಯವಂತ ಹಾಗೂ ಉತ್ಸಾಹಭರಿತ ಮೂರು ವರ್ಷದ ಬಾಲಕನಾಗಿ ಬೆಳೆದಿದ್ದು, ಶಾಲಾ ಪೂರ್ವ ಶಿಕ್ಷಣವನ್ನು (ಪ್ರಿಸ್ಕೂಲ್) ಪ್ರಾರಂಭಿಸಲು ಸಿದ್ಧನಾಗಿದ್ದಾನೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿನ ಆರಂಭಿಕ ಹಂತದ ಚಿಕಿತ್ಸೆ, ವಿಶೇಷ ಶಸ್ತ್ರಚಿಕಿತ್ಸಾ ಪರಿಣತಿ ಮತ್ತು ವಿವಿಧ ವಿಭಾಗಗಳ ಸಮನ್ವಯದೊಂದಿಗೆ ನೀಡಲಾದ ಆರೈಕೆಯ ಫಲವಾಗಿ ಇದು ಸಾಧ್ಯವಾಗಿದೆ.

ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಪ್ರಾಯದ ಶಿಶುವನ್ನು ಆಸ್ಪತ್ರೆಗೆ ಕರೆತರಲಾಯಿತು; ಇದು ಯಾವುದಾದರೂ ಗಂಭೀರ ನರರೋಗದ ಸಮಸ್ಯೆಯಿರುವ ಕುರಿತು ತಕ್ಷಣದ ಆತಂಕವನ್ನು ಉಂಟುಮಾಡಿತು. ಮೆದುಳಿನ ಎಂಆರ್‌ಐ ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿಯೊಂದು ಕಂಡುಬಂದಿದ್ದು, ಅದು 'ಹೈ-ಗ್ರೇಡ್' (ತೀವ್ರ ಸ್ವರೂಪದ) ಗೆಡ್ಡೆಯಾಗಿರುವ ಸಾಧ್ಯತೆಯನ್ನು ಬಲವಾಗಿ ಸೂಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ವೈದ್ಯಕೀಯ ತಂಡಕ್ಕೆ ಇದರ ರೋಗನಿರ್ಣಯವು ಒಂದು ಅಸಾಧಾರಣ ಸವಾಲಾಗಿ ಪರಿಣಮಿಸಿತು: ಏಕೆಂದರೆ ರೋಗಿಯು ಕೇವಲ ಎರಡು ವಾರಗಳ ಹಸುಳೆಯಾಗಿದ್ದರೂ, ಆ ಗೆಡ್ಡೆಯು ಆಗಲೇ ಅತ್ಯಂತ ದೊಡ್ಡದಾಗಿತ್ತು.

ಯಾವುದೇ ಸಂದರ್ಭದಲ್ಲೂ, ನವಜಾತ ಶಿಶುವಿಗೆ ಶಸ್ತ್ರಚಿಕಿತ್ಸೆ ನಡೆಸುವುದು ತಾಂತ್ರಿಕವಾಗಿ ಅತ್ಯಂತ ಸವಾಲಿನ ಕೆಲಸ; ಅದರಲ್ಲೂ, ಇಷ್ಟು ದೊಡ್ಡ ಗಾತ್ರದ ಗೆಡ್ಡೆಯಿರುವಾಗ ಈ ಸವಾಲು ಇನ್ನಷ್ಟು ಹೆಚ್ಚಿರುತ್ತದೆ. ಈ ವಯಸ್ಸಿನ ಮಗುವಿನಲ್ಲಿ ರಕ್ತದ ಪ್ರಮಾಣವು ಬಹಳ ಕಡಿಮೆಯಿರುವುದರಿಂದ, ಸ್ವಲ್ಪವೇ ರಕ್ತ ನಷ್ಟವಾದರೂ ಅದು ಗಂಭೀರ ಪರಿಣಾಮಗಳನ್ನು ಬೀರಬಹುದು; ಹೀಗಾಗಿ, ಶಸ್ತ್ರಚಿಕಿತ್ಸೆ ನಡೆಸುವುದು ಹಾಗೂ ಆತಂಕಗೊಂಡಿರುವ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ ಸಮಾಧಾನಪಡಿಸುವುದು – ಇವೆರಡೂ ಅತ್ಯಂತ ಕಠಿಣ ಕಾರ್ಯಗಳಾಗಿರುತ್ತವೆ. ಇದರಲ್ಲಿರುವ ಅಪಾಯಗಳ ಬಗ್ಗೆ ಹೆತ್ತವರಿಗೆ ಸಂಪೂರ್ಣ ಅರಿವು ಮೂಡಿಸಿದ ನಂತರ, ವೈದ್ಯಕೀಯ ತಂಡವು ಶಸ್ತ್ರಚಿಕಿತ್ಸೆಯನ್ನು ಮುಂದುವರಿಸಲು ನಿರ್ಧರಿಸಿತು.

ನಿರೀಕ್ಷೆಯಂತೆಯೇ ಈ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದಾಗಿತ್ತು, ಆದರೂ ನರರೋಗ ಶಸ್ತ್ರಚಿಕಿತ್ಸಕರು ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಶಸ್ತ್ರಚಿಕಿತ್ಸೆಯ ನಂತರ, ಮಗುವನ್ನು ಸೂಕ್ತ ಆರೈಕೆಗಾಗಿ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ ಸ್ಥಳಾಂತರಿಸಲಾಯಿತು. ಆರಂಭದಲ್ಲಿ ಸವಾಲುಗಳಿದ್ದರೂ, ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿತು ಮತ್ತು ಚೇತರಿಕೆಯ ಸ್ಥಿರ ಲಕ್ಷಣಗಳನ್ನು ತೋರಿತು; ಅಂತಿಮವಾಗಿ, ಶಸ್ತ್ರಚಿಕಿತ್ಸೆ ನಡೆದ ಒಂದು ವಾರದ ನಂತರ ಮಗುವನ್ನು ಸ್ಥಿರವಾದ ಆರೋಗ್ಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

**UDUPI XPRESS**

**LINK:** https://udupixpress.com/doctors-successfully-remove-a-massive-brain-tumor-from-a-15-day-old-infant/

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ 15 ದಿನದ ಹಸುಗೂಸಿನಲ್ಲಿದ್ದ ಬೃಹತ್ ಮೆದುಳಿನ ಗೆಡ್ಡೆ ಹೊರತೆಗೆದು ವೈದ್ಯರಿಂದ ಯಶಸ್ವಿ ಶಸ್ತ್ರಚಿಕಿತ್ಸೆ



ಮಣಿಪಾಲ, ಸೆ.24: ಕೇವಲ 15 ದಿನಗಳ ಪ್ರಾಯದಲ್ಲಿದ್ದಾಗ ಮೆದುಳಿನ ಪ್ರಮುಖ ಶಸ್ತ್ರಚಿಕಿತ್ಸೆಗೆ ಒಳಗಾದ ಮಗುವೊಂದು ಇಂದು ಆರೋಗ್ಯವಂತ ಹಾಗೂ ಉತ್ಸಾಹಭರಿತ ಮೂರು ವರ್ಷದ ಬಾಲಕನಾಗಿ ಬೆಳೆದಿದ್ದು ಶಾಲಾ ಪೂರ್ವ ಶಿಕ್ಷಣವನ್ನು (ಪ್ರಿಸ್ಕೂಲ್) ಪ್ರಾರಂಭಿಸಲು ಸಿದ್ಧನಾಗಿದ್ದಾನೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿನ ಆರಂಭಿಕ ಹಂತದ ಚಿಕಿತ್ಸೆ, ವಿಶೇಷ ಶಸ್ತ್ರಚಿಕಿತ್ಸಾ ಪರಿಣತಿ ಮತ್ತು ವಿವಿಧ ವಿಭಾಗಗಳ ಸಮನ್ವಯದೊಂದಿಗೆ ನೀಡಲಾದ ಆರೈಕೆಯ ಫಲವಾಗಿ ಇದು ಸಾಧ್ಯವಾಗಿದೆ.

ತಲೆಯ ಗಾತ್ರವು ಗಮನಾರ್ಹವಾಗಿ ದೊಡ್ಡದಾಗಿದ್ದ ಸ್ಥಿತಿಯಲ್ಲಿ 15 ದಿನಗಳ ಪ್ರಾಯದ ಶಿಶುವನ್ನು ಆಸ್ಪತ್ರೆಗೆ ಕರೆತರಲಾಯಿತು. ಇದು ಯಾವುದಾದರೂ ಗಂಭೀರ ನರರೋಗದ ಸಮಸ್ಯೆಯಿರುವ ಕುರಿತು ತಕ್ಷಣದ ಆತಂಕವನ್ನು ಉಂಟುಮಾಡಿತು. ಮೆದುಳಿನ ಎಂಆರ್‌ಐ (MRI) ಸ್ಕ್ಯಾನ್‌ನಲ್ಲಿ ತಲೆಬುರುಡೆಯೊಳಗೆ ದೊಡ್ಡ ದ್ರವ್ಯರಾಶಿಯೊಂದು (mass) ಕಂಡುಬಂದಿದ್ದು, ಅದು ಹೈ-ಗ್ರೇಡ್ (ತೀವ್ರ ಸ್ವರೂಪದ) ಗೆಡ್ಡೆಯಾಗಿರುವ ಸಾಧ್ಯತೆಯನ್ನು ಬಲವಾಗಿ ಸೂಚಿಸುತ್ತಿತ್ತು. ಚಿಕಿತ್ಸೆ ನೀಡುತ್ತಿದ್ದ ವೈದ್ಯಕೀಯ ತಂಡಕ್ಕೆ ಇದರ ರೋಗನಿರ್ಣಯವು ಒಂದು ಅಸಾಧಾರಣ ಸವಾಲಾಗಿ ಪರಿಣಮಿಸಿತು. ಏಕೆಂದರೆ ರೋಗಿಯು ಕೇವಲ ಎರಡು ವಾರಗಳ ಹಸುಳೆಯಾಗಿದ್ದರೂ, ಆ ಗೆಡ್ಡೆಯು ಆಗಲೇ ಅತ್ಯಂತ ದೊಡ್ಡದಾಗಿತ್ತು.

ಯಾವುದೇ ಸಂದರ್ಭದಲ್ಲೂ ನವಜಾತ ಶಿಶುವಿಗೆ ಶಸ್ತ್ರಚಿಕಿತ್ಸೆ ನಡೆಸುವುದು ತಾಂತ್ರಿಕವಾಗಿ ಅತ್ಯಂತ ಸವಾಲಿನ ಕೆಲಸ; ಅದರಲ್ಲೂ ಇಷ್ಟು ದೊಡ್ಡ ಗಾತ್ರದ ಗೆಡ್ಡೆಯಿರುವಾಗ ಈ ಸವಾಲು ಇನ್ನಷ್ಟು ಹೆಚ್ಚಿರುತ್ತದೆ. ಈ ವಯಸ್ಸಿನ ಮಗುವಿನಲ್ಲಿ ರಕ್ತದ ಪ್ರಮಾಣವು ಬಹಳ ಕಡಿಮೆಯಿರುವುದರಿಂದ, ಸ್ವಲ್ಪವೇ ರಕ್ತ ನಷ್ಟವಾದರೂ ಅದು ಗಂಭೀರ ಪರಿಣಾಮಗಳನ್ನು ಬೀರಬಹುದು; ಹೀಗಾಗಿ, ಶಸ್ತ್ರಚಿಕಿತ್ಸೆ ನಡೆಸುವುದು ಹಾಗೂ ಆತಂಕಗೊಂಡಿರುವ ಪೋಷಕರಿಗೆ ಸೂಕ್ತ ಮಾಹಿತಿ ನೀಡಿ ಸಮಾಧಾನಪಡಿಸುವುದು – ಇವೆರಡೂ ಅತ್ಯಂತ ಕಠಿಣ ಕಾರ್ಯಗಳಾಗಿರುತ್ತವೆ. ಇದರಲ್ಲಿರುವ ಅಪಾಯಗಳ ಬಗ್ಗೆ ಹೆತ್ತವರಿಗೆ ಸಂಪೂರ್ಣ ಅರಿವು ಮೂಡಿಸಿದ ನಂತರ, ವೈದ್ಯಕೀಯ ತಂಡವು ಶಸ್ತ್ರಚಿಕಿತ್ಸೆಯನ್ನು ಮುಂದುವರಿಸಲು ನಿರ್ಧರಿಸಿತು.

ನಿರೀಕ್ಷೆಯಂತೆಯೇ ಈ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದಾಗಿತ್ತು, ಆದರೂ ನರರೋಗ ಶಸ್ತ್ರಚಿಕಿತ್ಸಕರು ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕುವಲ್ಲಿ ಯಶಸ್ವಿಯಾದರು. ಶಸ್ತ್ರಚಿಕಿತ್ಸೆಯ ನಂತರ, ಮಗುವನ್ನು ಸೂಕ್ತ ಆರೈಕೆಗಾಗಿ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ (NICU) ಸ್ಥಳಾಂತರಿಸಲಾಯಿತು. ಆರಂಭದಲ್ಲಿ ಸವಾಲುಗಳಿದ್ದರೂ, ಮಗು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸಿತು ಮತ್ತು ಚೇತರಿಕೆಯ ಸ್ಥಿರ ಲಕ್ಷಣಗಳನ್ನು ತೋರಿತು; ಅಂತಿಮವಾಗಿ, ಶಸ್ತ್ರಚಿಕಿತ್ಸೆ ನಡೆದ ಒಂದು ವಾರದ ನಂತರ ಮಗುವನ್ನು ಸ್ಥಿರವಾದ ಆರೋಗ್ಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಆ ಮಗುವಿನ ನರಮಂಡಲದ ಬೆಳವಣಿಗೆ ಮತ್ತು ಒಟ್ಟಾರೆ ಬೆಳವಣಿಗೆಯನ್ನು ತಂಡವು ಸೂಕ್ಷ್ಮವಾಗಿ ಗಮನಿಸುತ್ತಾ, ನಿಯಮಿತವಾಗಿ ಪರಿಶೀಲನೆಗೆ ಒಳಪಡಿಸುತ್ತಾ ಬಂದಿದೆ. ಮೂರು ವರ್ಷಗಳ ನಂತರ, ಮಗು ಅತ್ಯುತ್ತಮ ಪ್ರಗತಿಯನ್ನು ಸಾಧಿಸಿದ್ದು, ಈಗ ತನ್ನ ಮುಂದಿನ ಮಹತ್ವದ ಹೆಜ್ಜೆಯಾದ 'ಪ್ರಿಸ್ಕೂಲ್' (ಪೂರ್ವ-ಪ್ರಾಥಮಿಕ ಶಾಲೆ) ಗೆ ಹೋಗಲು ಸಿದ್ಧವಾಗಿದೆ.

ನವಜಾತ ಶಿಶುಗಳು ಮತ್ತು ಮಕ್ಕಳಲ್ಲಿ ಮೆದುಳಿನ ಗೆಡ್ಡೆಗಳ ನಿರ್ವಹಣೆಗೆ ಶಸ್ತ್ರಚಿಕಿತ್ಸೆಗಿಂತ ಹೆಚ್ಚಿನದ್ದು ಅಗತ್ಯವಿದೆ. ಇದಕ್ಕೆ ನರಶಸ್ತ್ರಚಿಕಿತ್ಸೆ, ನವಜಾತ ಶಿಶುಶಾಸ್ತ್ರ, ಮಕ್ಕಳ ಆಂಕೊಲಾಜಿ, ತೀವ್ರ ನಿಗಾ ಮತ್ತು ಪುನಶ್ಚೇತನ ಸೇರಿದಂತೆ ಸಂಘಟಿತ, ಬಹು ಆಯಾಮ ತಂಡಗಳ ಪ್ರಯತ್ನಗಳು ಬೇಕಾಗುತ್ತವೆ. ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯಲ್ಲಿ, ಡಾ. ರಾಘವೇಂದ್ರ ನಾಯಕ್ ನೇತೃತ್ವದ ನರಶಸ್ತ್ರಚಿಕಿತ್ಸಾ ವಿಭಾಗವು, ಡಾ. ಶೀಲಾ ಎಸ್ ಮಥಾಯಿ ನೇತೃತ್ವದ ನವಜಾತ ಶಿಶು ಆರೈಕೆ ತಂಡ, ಡಾ. ವಾಸುದೇವ್ ಭಟ್ ನೇತೃತ್ವದ ಮಕ್ಕಳ ಆಂಕೊಲಾಜಿ ಸೇವೆಗಳು ಮತ್ತು ಸಮಗ್ರ ಪುನಶ್ಚೇತನ ಸೌಲಭ್ಯಗಳೊಂದಿಗೆ ಈ ಆರೈಕೆಯನ್ನು ಒದಗಿಸಲಾಗಿದೆ. ಬೃಹತ್ ಮೆದುಳಿನ ಗೆಡ್ಡೆಯನ್ನು ಎದುರಿಸುತ್ತಿರುವ 15 ದಿನಗಳ ಮಗುವಿನಿಂದ ಪೂರ್ವ ಪ್ರಾಥಮಿಕ ತರಗತಿ ಪ್ರವೇಶಿಸಲು ತಯಾರಿ ನಡೆಸುತ್ತಿರುವ ಹರ್ಷಚಿತ್ತದಿಂದ ಕೂಡಿದ ಮೂರು ವರ್ಷದ ಮಗುವಿನವರೆಗೆ, ಅವರ ಪ್ರಯಾಣವು ಆರಂಭಿಕ ರೋಗ ನಿರ್ಣಯ , ತಂಡದ ಕೆಲಸ, ಸ್ಥಿತಿಸ್ಥಾಪಕತ್ವ ಮತ್ತು ಭರವಸೆಗೆ ಸಾಕ್ಷಿಯಾಗಿದೆ.

**LOKABANDHU NEWS**

**LINK:** https://www.lokabandhunews.in/2026/09/successful-surgery-of-brain-tumor-in-15.html?m=1



ಲೋಕಬಂಧು ನ್ಯೂಸ್ | ಮಣಿಪಾಲ, ಸೆ.25 Time & Calendars

ಕೇವಲ 15 ದಿನಗಳ ಪ್ರಾಯದ ಹಸುಗೂಸಿನ ತಲೆಬುರುಡೆಯೊಳಗಿದ್ದ ಬೃಹತ್ ಮೆದುಳಿನ ಗೆಡ್ಡೆಯನ್ನು ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಸಂಪೂರ್ಣವಾಗಿ ತೆಗೆದುಹಾಕಿದ್ದಾರೆ.




ತಲೆಯ ಗಾತ್ರ ಅಸಹಜವಾಗಿ ಹೆಚ್ಚಾದ ಹಿನ್ನೆಲೆಯಲ್ಲಿ ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎಂಆರ್.ಐ ಪರೀಕ್ಷೆಯಲ್ಲಿ ತಲೆಬುರುಡೆಯೊಳಗೆ ದೊಡ್ಡ ಗಾತ್ರದ ದ್ರವ್ಯರಾಶಿ ಪತ್ತೆಯಾಗಿದ್ದು, ತೀವ್ರ ಸ್ವರೂಪದ ಗೆಡ್ಡೆಯ ಸಾಧ್ಯತೆ ಕಂಡುಬಂದಿತ್ತು.





ನವಜಾತ ಶಿಶುವಿನ ರಕ್ತದ ಪ್ರಮಾಣ ಕಡಿಮೆ ಇರುವುದರಿಂದ ಶಸ್ತ್ರಚಿಕಿತ್ಸೆ ಅತ್ಯಂತ ಸವಾಲಿನದ್ದಾಗಿದ್ದು, ಪೋಷಕರಿಗೆ ಚಿಕಿತ್ಸೆಯ ಅಪಾಯಗಳನ್ನು ವಿವರಿಸಿದ ಬಳಿಕ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದರು.

ನರಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ರಾಘವೇಂದ್ರ ನಾಯಕ್ ನೇತೃತ್ವದ ತಂಡ ಯಶಸ್ವಿಯಾಗಿ ಗೆಡ್ಡೆಯನ್ನು ಸಂಪೂರ್ಣವಾಗಿ ತೆಗೆದುಹಾಕಿತು. ಬಳಿಕ ಮಗುವನ್ನು ಎನ್ಐಸಿಯುನಲ್ಲಿರಿಸಿ ತೀವ್ರ ನಿಗಾ ವಹಿಸಲಾಯಿತು.